**<u>ಓ.ಎಸ್.ನಂಬ್ರ: 481/2023 ಡಿ.ಡಬ್ಲ್ಯೂ :1</u>**

ದಿನಾಂಕಃ 25-01-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು

**<u>ಪಾಟಿ ಸವಾಲುಃ ಶ್ರೀ ಸಿ.ಆರ್.ಪಿ. ವಕೀಲರಿಂದ</u>**

ನಾನು ಬಿ.ಕಾಂ ವರೆಗೆ ಓದಿರುತ್ತೇನೆ. ನಾನು ಮುಂಬೈಯಲ್ಲಿ ಅಕೌಂಟೆಂಟ್ ಆಗಿ ಕೆಲಸ ಮಾಡುತ್ತಿದ್ದೇನೆ. 1ನೇ ಪ್ರತಿವಾದಿ ನನ್ನ ತಾಯಿ. ನಾನು 1977ನೇ ಇಸವಿಯಲ್ಲಿ ಜನಿಸಿರುತ್ತೇನೆ.

2. ಸುಕ್ರು ಹೆಂಗಸ್ಸು ನನ್ನ ತಾಯಿಯ ತಾಯಿಯ ಅಕ್ಕ. ಅವರು 2003ನೇ ಇಸವಿಯಲ್ಲಿ ತೀರಿಹೋಗಿರುತ್ತಾರೆ. ಸುಕ್ರುರವರಿಗೆ ಓದು ಬರಹ ಬರುತ್ತಿರಲಿಲ್ಲ. ಅವರು ಜೀವಂತ ಇರುವಾಗ ಕುಟುಂಬದ ಆಸ್ತಿಯಲ್ಲಿ ಬೇಸಾಯ ಮಾಡುತ್ತಿದ್ದರು. ಅವರಿಗೆ ಕುಟುಂಬದ ಆಸ್ತಿಯಿಂದ ಆದಾಯ ಬರುತ್ತಿತ್ತು. ವಾದಿ ಪಾಲು ಬೇಕು ಎಂದು ದಾವೆಯನ್ನು ಹಾಕಿರುತ್ತಾರೆ.

3. 11ನೇ ಪ್ರತಿವಾದಿ ಏನು ಉತ್ತರ ಹಾಕಿದ್ದಾರೆ ಎಂದು ಗೊತ್ತಿದೆ. 11ನೇ ಪ್ರತಿವಾದಿ ದಾವೆಯಲ್ಲಿ ಸುಳ್ಳು ಉತ್ತರವನ್ನು ಹಾಕಿರುತ್ತಾರೆ. ಪ್ರತಿವಾದ ಪತ್ರದಲ್ಲಿ ಹೇಳಿರುವ 1962ರ ಕ್ರಯ ಸಾಧನವನ್ನು ಹಾಜರುಪಡಿಸಿರುತ್ತೇನೆ. ಸಾಕ್ಷಿಯು ದಾಖಲೆಗಳನ್ನು ನೋಡಿ ಸದ್ರಿ ದಾಖಲೆಗಳನ್ನು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ಸದ್ರಿ ಕ್ರಯ ಪತ್ರದ ಮುಖಾಂತರ ದಾವಾ ಆಸ್ತಿಯ ಐಟಂ ನಂಬ್ರ 4 ಮತ್ತು 5ನ್ನು ಖರೀದಿ ಮಾಡಿರುತ್ತಾರೆ. ಸದ್ರಿ ಕ್ರಯ ಪತ್ರದಲ್ಲಿ 2 ಜಾಗವನ್ನು ಸೇರಿಸಿರುತ್ತಾರೆ. ಸದ್ರಿ ಆಸ್ತಿಯ ಪಹಣಿ ಪತ್ರಿಕೆಯನ್ನು ಹಾಜರುಪಡಿಸಲು ತೊಂದರೆ ಇಲ್ಲ. 1962ರ ಕ್ರಯ ಸಾಧನಕ್ಕೆ ಒಳಪಟ್ಟಿರುವ ಆಸ್ತಿಯ ಆರ್. ಟಿ.ಸಿ ನಾಗಮ್ಮರವರ ಹೆಸರಿನಲ್ಲಿ ಇದೆ.

4. ಸುಕ್ರು ರವರು ತೀರಿ ಹೋದ ನಂತರ ನಾಗಮ್ಮ ರವರ ಹೆಸರಿಗೆ ಆರ್. ಟಿ.ಸಿ ಬದಲಾವಣೆ ಆಗಿದೆ. ಸುಕ್ರುರವರಿಗೆ ಮಕ್ಕಳು ಇರುವುದಿಲ್ಲ ಎಂದರೆ ಸರಿ. ಸುಕ್ರುರವರಿಗೆ ಪುಟ್ಟಯ್ಯ, ಗಣಪ ಮತ್ತು ಚಂದು ಸಹೋದರ ಸಹೋದರಿಯರು. ಪುಟ್ಟಯ್ಯರವರ ಹೆಂಡತಿ 9 ನೇ ಪ್ರತಿವಾದಿ. 10 ರಿಂದ 13ನೇ ಪ್ರತಿವಾದಿಯರು ಪುಟ್ಟಯ್ಯರವರ ಮಕ್ಕಳು.

5. ವಿಲೀನ ಪ್ರಕಾರ ಆರ್.ಟಿ.ಸಿ ಬದಲಾವಣೆಯಾಗುವ ಸಮಯದಲ್ಲಿ ಸುಕ್ರುರವರು ಕುಟುಂಬದವರು ಒಪ್ಪಿ ಗೆಯನ್ನು ಸೂಚಿಸಿರುತ್ತಾರೆ. ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ. ಸುಕ್ರುರವರ ದಿಃ 15-10-1999ರಂದು ವೀಲುನಾಮೆ ಬರೆದಿರುತ್ತಾರೆ. ಆ ಸಮಯದಲ್ಲಿ ಸುಕ್ರುರವರಿಗೆ 67 ವರ್ಷ ವಯಸ್ಸು. ವೀಲು ಬರೆಯುವ ಸಮಯದಲ್ಲಿ ಸುಕ್ರರವರು ನಮ್ಮ ಜೊತೆ ಇದ್ದರು.

6. 1ನೇ ವಾದಿ ನನ್ನ ಅಕ್ಕ. 3 ರಿಂದ 7ನೇ ಪ್ರತಿವಾದಿಯರು ನನ್ನ ಸಹೋದರ ಸಹೋದರಿಯರು. ನನ್ನ ತಾಯಿಗೆ ವೀಲು ಮಾಡಿಕೊಟ್ಟಿರುವ ಬಗ್ಗೆ ವಾದಿ ಹೇಳಿರುವುದಿಲ್ಲ.

7. ಸುಕ್ರರವರು ಖರೀದಿ ಮಾಡಿದ ಆಸ್ತಿಗಳು ಪಾಲಾಗಬೇಕು ಎಂದು ಹೇಳಿದ್ದಾರೆ ಎಂದರೆ , ಸಾಕ್ಷಿಯು ಕುಟುಂದದವರು ಎಲ್ಲರೂ ಒಪ್ಪಿ ಗೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಅಣ್ಣಪ್ಪರವರು ಕೂಡ ಪಾಲಿಗೆ ಒಪ್ಪಿಗೆ ನೀಡಿರುತ್ತಾರೆ. ಪುಟ್ಟಯ್ಯರವರು ಹೆಂಡತಿ ಮಕ್ಕಳು ಕೂಡ ಒಪ್ಪಿಗೆಯನ್ನು ನೀಡಿರುತ್ತಾರೆ. ಚರ್ಚೆ ಆಗುವ ಸಮಯದಲ್ಲಿ ಸುಕ್ರುರವರ ಆಸ್ತಿಗಳು ಕೂಡ ಪಾಲಾಗಬೇಕು ಎಂದು ನಿರ್ಧರಿಸಿರುತ್ತೇವೆ. ನಾವು ದೇವಾಡಿಗ ಜಾತಿಗೆ ಸೇರಿದವರು ಮತ್ತು ಅಳಿಯ ಸಂತಾನವನ್ನು ಆಚರಿಸುತ್ತೇವೆ.

8. ವೀಲನ್ನು ಹಾಜರುಪಡಿಸಿರುವುದಿಲ್ಲ. ಅದನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ಸುಕ್ರುರವರು ಆಸ್ತಿಯನ್ನು ಕುಟುಂಬದ ಹೆಸರಿನಲ್ಲಿ ಖರೀದಿ ಮಾಡಿ ಇಟ್ಟಿರುತ್ತಾರೆ ಎಂದರೆ ಸರಿ. ಸದ್ರಿ ವೀಲಿಗೆ ಸಾಕ್ಷಿ ಹಾಕಿದವರು ಮಂಜುನಾಥ ಆಚಾರಿ ಮತ್ತು ಚಂದು ಅರೆಬೈಲು. ಸದ್ರಿ ವೀಲು ನೊಂದಾಯಿತ ವೀಲುನಾಮೆ ಆಗಿರುವುದಿಲ್ಲ. ವೀಲನ್ನು ಕುಂದಾಪುರದ ಸದಾನಂದ ಶೆಟ್ಟಿರವರ ಕಚೇರಿಯಲ್ಲಿ ಮಾಡಿರುತ್ತೇವೆ. ವೀಲನ್ನು ತಯಾರಿಸುವಾಗ ಅವರ ಕಚೇರಿಯಲ್ಲಿ ನಾನು ಇರಲಿಲ್ಲ. ನನ್ನ ತಾಯಿ ವೀಲು ತಯಾರಿಸುವಾಗ ಅವರ ಕಚೇರಿಯಲ್ಲಿ ಹಾಜರು ಇದ್ದರೋ ಇಲ್ಲವೋ ಎಂದು ಗೊತ್ತಿಲ್ಲ. ವೀಲು ಮಾಡುವಾಗ ಅಣ್ಣಪ್ಪರವರು ಅವರ ಕಚೇರಿಯಲ್ಲಿ ಹಾಜರಿದ್ದರು. ವೀಲನ್ನ ವಕೀಲರ ಕಚೇರಿಯಲ್ಲಿ ತಯಾರಿಸಿ ಮನೆಯಲ್ಲಿ ಸಹಿ ಮಾಡಿರುತ್ತಾರೆ. ಸುಕ್ರುರವರು ಕುಂದಾಪುರಕ್ಕೆ ಹೋಗಿರುವುದಿಲ್ಲ. ವೀಲನ್ನು ತಯಾರಿಸಲು ಅಣ್ಣಪ್ಪರವರು ಮಾಹಿತಿಯನ್ನು ನೀಡಿರುತ್ತಾರೆ. ಸುಕ್ರುರವರು ಸಹಿ ಮಾಡುವಾಗ ನಾನು ಮನೆಯಲ್ಲಿ ಇರಲಿಲ್ಲ ಆಗ ನನ್ನ ತಾಯಿ ಇದ್ದರು. ಎಷ್ಟು ಗಂಟೆಗೆ ಸುಕ್ರು ರವರು ಸಹಿ ಮಾಡಿದ್ದರು ಎಂದು ಗೊತ್ತಿಲ್ಲ. ಅವರು ಸಹಿ ಮಾಡುವಾಗ ಯಾರೆಲ್ಲ ಇದ್ದರು ಎಂದು ಗೊತ್ತಿಲ್ಲ. ಅವರು ಹೆಬ್ಬೆಟ್ಟು ಮಾಡಿರುತ್ತಾರೆ. ವೀಲನ್ನು 2ನೇ ಪ್ರತಿವಾದಿ ಓದಿ ಹೇಳಿರುತ್ತಾರೆ. ಆ ಕಾಲದಲ್ಲಿ 2ನೇ ಪ್ರತಿವಾದಿ ನಮ್ಮ ಮನೆಯಲ್ಲಿ ಅತಿ ಹೆಚ್ಚು ಓದಿದ್ದವರು. ಸುಕ್ರುರವರು 2ನೇ ಪ್ರತಿವಾದಿ ಮತ್ತು ನನ್ನ ತಾಯಿಯನ್ನು

ಪೂರ್ತಿಯಾಗಿ ನಂಬಿದ್ದರು ಎಂದರೆ ಸರಿ. ಸುಕ್ರುರವರಿಗೆ ವೀಲುನಾಮೆಯನ್ನು ಮಾಡಲು ಸ್ವಂತ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಸುಕ್ರುರವರಿಗೆ ವೀಲುನಾಮೆ ಮಾಡುವ ಇಚ್ಛೆ ಇರಲಿಲ್ಲ ಮತ್ತು ನನ್ನ ತಾಯಿ ಮತ್ತು 2ನೇ ಪ್ರತಿವಾದಿ ಒತ್ತಡ ತಂದಿರುತ್ತಾರೆ ಎಂದರೆ ಸರಿಯಲ್ಲ. ಸುಕ್ರುರವರ ನಂಬಿಕೆಯನ್ನು ದುರುಪಯೋಗ ಪಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿರುವುದೆಲ್ಲ ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇದೆ

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಬೈಂದೂರು**